ಇ) ಇಲ್ಲ.

ಈ) ಲೆಕ್ಕ ಪತ್ರಗಳನ್ನು ಸಮರ್ಪಕವಾಗಿ ಇಟ್ಟಿರುವಂತಹ ನಿರಪರಾಧಿ ವರ್ತಕರಿಗೆ ಈ ತನಕ ಯಾವುದೇ ರೀತಿಯ ಹಿಂಸೆ ಅಥವಾ ಕಿರಕುಳವು ಆಹಾರ ಮತ್ತು ನಾಗರೀಕ ಸರಬರಾಜು ಜಾರಿ ಇಲಾಖೆಯಿಂದ ಉಂಟಾಗಿರುವುದಿಲ್ಲ. ಇನ್ನೂ ಮುಂದೆ ಸಹ ಇದೇ ರೀತಿ ನಡೆದುಕೊಳ್ಳಲಾಗುವುದು.

ರಾಜ್ಯಕ್ಕೆ ಬರುತ್ತಿರುವ ಪಾಮೋಲಿನ್ ಎಣ್ಣೆ

563 - ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯಕ್ಕೆ ಬರುತ್ತಿರುವ ಪಾಮೋಲಿನ್ ಎಣ್ಣೆಯ ಪ್ರಮಾಣವೆಷ್ಟು?

2) ಈ ಪ್ರಮಾಣವನ್ನು ಹೆಚ್ಚು ಮಾಡುವ ಯೋಜನೆ ಸರ್ಕಾರದ ಮುಂದೆ ಇದೆಯೇ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).

ಅ) ಕೇಂದ್ರ ಸರ್ಕಾರವು ರಾಜ್ಯಕ್ಕೆ ಒಂದು ನಿಗಧಿತ ಪ್ರಮಾಣದಲ್ಲಿ ಪಾಮೋಲಿನ ಎಣ್ಣೆಯನ್ನು ಬಿಡುಗಡೆ ಮಾಡುತ್ತಿಲ್ಲ. ಕಳೆದ ನವೆಂಬರ್ 90ರಲ್ಲಿ 4000 ಮೆ. ಟನ್ ಬಿಡುಗಡೆ ಮಾಡಿದ್ದರೆ ಡಿಸೆಂಬರ್ 90 ಮತ್ತು ಜನವರಿ 91ರಲ್ಲಿ ಬಿಡುಗಡೆ ಮಾಡದೆ ಫೆಬ್ರವರಿ 91ರಲ್ಲಿ ಕೇವಲ 1600 ಮೆ.ಟನ್ ಬಿಡುಗಡೆ ಮಾಡಿರುತ್ತಾರೆ.

ಆ) ರಾಜ್ಯಕ್ಕೆ ತಿಂಗಳಿಗೆ 11,000 ಮೆ.ಟನ್ ಬೇಡಿಕೆ ಇದ್ದು ಹೆಚ್ಚಿನ ಪ್ರಮಾಣದಲ್ಲಿ ಬಿಡುಗಡೆ ಮಾಡಲು ಕೇಂದ್ರ ಸರ್ಕಾರವನ್ನು ಕೋರಲಾಗಿದೆ.

ರಾಜ್ಯಕ್ಕೆ ಬರುತ್ತಿರುವ ಡೀಸೆಲ್ ಮತ್ತು ಸೀಮೆ ಎಣ್ಣೆ ಸರಬರಾಜಿನ ಪ್ರಮಾಣ

565 - ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು.ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕೇಂದ್ರ ಸರ್ಕಾರಿಂದ ರಾಜ್ಯಕ್ಕೆ ಬರುತ್ತಿರುವ ಸೀಮೆಎಣ್ಣೆ ಮತ್ತು ಡೀಸೆಲ್ ಪ್ರಮಾಣವೆಷ್ಟು?

ಆ) ಇದರ ವಿತರಣೆ ಜಿಲ್ಲಾವಾರು ಯಾವ ಪ್ರಮಾಣದಲ್ಲಿ ಆಗುತ್ತಿದೆ.

ಇ) ಕೇಂದ್ರ ಸರ್ಕಾರದಿಂದ ಬರುತ್ತಿರುವ ಸೀಮೆಎಣ್ಣೆ ಮತ್ತು ಡೀಸೆಲ್ ಹೆಚ್ಚು ಮಾಡಲು ಸರ್ಕಾರ ಏನಾದರೂ ಕ್ರಮ ತೆಗೆದುಕೊಂಡಿದೆಯೆ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ರಾಜ್ಯಕ್ಕೆ ಸರಾಸರಿ ತಿಂಗಳಿಗೆ 48000 ಕಿ.ಎಲ್. ಸೀಮೆಎಣ್ಣೆ ಮತ್ತು 88,000 ಮೆ.ಟನ್ ಡೀಸೆಲ್ ಕೇಂದ್ರದಿಂದ ಬಿಡುಗಡೆಯಾಗುತ್ತಿದೆ.

ಆ) ಸೀಮೆಎಣ್ಣೆಯನ್ನು ಆ.ಜಿಲ್ಲೆಯ ಪಡಿತರ ಚೀಟಿಗಳ ಮತ್ತು ಅವುಗಳಿಗೆ ನಿಗದಿಸಿದ ಪ್ರಮಾಣದ ಆಧಾರದ ಮೇಲೆ ಹಂಚಿಕೆ ಮಾಡಲಾಗುತ್ತಿದೆ. ಡೀಸೆಲ್‌ನ್ನು ಆಯಿಲ್ ಕಂಪನಿಯವರು ಹಿಂದಿನ ವರ್ಷಗಳ ಹಂಚಿಕೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಹಂಚಿಕೆ ಮಾಡುತ್ತಾರೆ.

ಇ) ರಾಜ್ಯಕ್ಕೆ ತಿಂಗಳಿಗೆ 67,000 ಕಿ. ಎಲ್. ಸೀಮೆಎಣ್ಣೆ ಮತ್ತು 1,10,000 ಮೆ.ಟನ್ ಡೀಸೆಲ್ ಬೇಡಿಕೆ ಇದ್ದು ಅಷ್ಟು ಪ್ರಮಾಣವನ್ನು ಪೂರೈಸಲು ಕೇಂದ್ರವನ್ನು ಕೋರಲಾಗಿದೆ.